ಶೂನ್ಯತೆಯ ಪರಿಣಾಮ. ಇವನಿಗೆ ಪ್ರಜಾಪತಿಯ ಉಪದೇಶ 'ದ' ಎಂದರೆ **'ದತ್ತ'** – ದಾನಮಾಡು ಎಂದರ್ಥ. ಎಲ್ಲವನ್ನೂ ನೀನೇ ಇಟ್ಟುಕೊಳ್ಳಬೇಡ, ಹಂಚಿ ಅನುಭವಿಸುವುದರಲ್ಲಿ ಒಂದು ಸುಖವಿದೆ ಎಂಬುದು ಮನುಷ್ಯರಿಗೆ ಪ್ರಜಾಪತಿಯ ಉಪದೇಶ.

ದೇವತೆಗಳದು ಕಾಮಪ್ರವೃತ್ತಿ – ಇಂದ್ರಿಯ ಸುಖದಲ್ಲೇ ಮತ್ತರಾಗಿರುವುದು. ಅದರಿಂದಲೇ ಅವರು ಅತ್ಯಂತ ದುರ್ಬಲರು. ದೇವಾಸುರ ಯುದ್ಧದಲ್ಲೆಲ್ಲ ದೇವತೆಗಳು ಹೀನಾಯ ಸೋಲನ್ನು ಅನುಭವಿಸುವುದನ್ನು ನೋಡುತ್ತೇವೆ. ಇತಿಹಾಸದಲ್ಲಿಯೂ ಇಂದ್ರಿಯಲೋಲುಪತೆಗೆ ಬಲಿಯಾದ ಅನೇಕ ಜನಾಂಗಗಳು ಅನಾಗರಿಕ ಜನರ ಧಾಳಿಗೆ ತುತ್ತಾಗಿ ನಾಶವಾಗಿರುವುದು ಕಂಡುಬರುತ್ತದೆ. ದೇವತೆಗಳಿಗೆ ಪ್ರಜಾಪತಿಯ ಉಪದೇಶ 'ದ', ಎಂದರೆ **'ದಾಮ್ಯತ'** – ಇಂದ್ರಿಯನಿಗ್ರಹ ಮಾಡಿ ಎಂದರ್ಥ. ಇದರ ಮೂಲಕ ಶಕ್ತಿಸಂಚಯವಾಗುತ್ತದೆ ಮತ್ತು ಇದು ಮುಂದಿನ ಪ್ರಗತಿಗೆ ಸಾಧನವಾಗುತ್ತದೆ.

ಅಸುರರು ಕ್ರೋಧೋನ್ಮತ್ತರು – ಎಲ್ಲವನ್ನೂ ಧ್ವಂಸಮಾಡುವ ಹಿಂಸಾತ್ಮಕ ಸ್ವಭಾವ ಅವರದು. ಈ ಪ್ರವೃತ್ತಿಯು ತುಂಬುಜೀವನದ ಕೊರತೆಯಿಂದ ಉಂಟಾಗುತ್ತದೆಂದು ಮನಶ್ಶಾಸ್ತ್ರರು ಹೇಳುತ್ತಾರೆ. ತುಂಬುಜೀವನದ ಕೊರತೆಯಿಂದ ಉಂಟಾಗುವ ನಿಃಸಾರ್ಥಕ ಭಾವವು ವ್ಯಕ್ತಿಯನ್ನು ಆತ್ಮದ್ವೇಷಿಯನ್ನಾಗಿ ಮಾಡುತ್ತದೆ ಮತ್ತು ಅದೇ ಮೂಲಕ ಇತರರನ್ನು ದ್ವೇಷಿಸುವಂತೆ ಮಾಡುತ್ತದೆ. ಆಗ ಅವನು ಹೀಗೆ ಯೋಚಿಸುತ್ತಾನೆ:

**ಅಸೌ ಮಯಾ ಹತಃ ಶತ್ರುರ್ಹನಿಷ್ಯೇ ಚಾಪರಾನಪಿ ।**
**ಈಶ್ವರೋಽಹಮಹಂ ಭೋಗೀ ಸಿದ್ಧೋಽಹಂ ಬಲವಾನ್ಸುಖೀ ॥**

"ಈ ಶತ್ರುವು ನನ್ನಿಂದ ಕೊಲ್ಲಲ್ಪಟ್ಟನು, ಇತರ ಶತ್ರುಗಳನ್ನೂ ಕೊಲ್ಲುತ್ತೇನೆ. ನಾನು ಈಶ್ವರ, ಭೋಗಿ, ಬಲವಂತ ಮತ್ತು ಸುಖೀ." (೧೬ : ೧೪)

ಇತರರನ್ನು ನೋಯಿಸುವುದರಲ್ಲೇ ಅವನು ಸುಖವನ್ನು ಕಾಣುತ್ತಾನೆ. ಯಾವುದೇ ಆತ್ಮನಿಗ್ರಹವಿಲ್ಲದೇ ಇರುವುದರಿಂದ ದುಷ್ಪ್ರವೃತ್ತಿಯ ಶಕ್ತಿಯಿಂದಲೇ ಅವನು ಬಲವಂತನಾಗಿರುತ್ತಾನೆ. ಅವನ ಕೋಪಾಗ್ನಿಗೆ ಎಲ್ಲವೂ ಆಹುತಿಯಾಗಬೇಕೆಂದು ಬಯಸುತ್ತಾನೆ. ಅದಕ್ಕೇ ಅವನು ಭೋಗಿ. ಎಲ್ಲವೂ ಎಲ್ಲರೂ ತನ್ನ ಭೋಗಕ್ಕಾಗಿಯೇ ಇರುವುದೆಂದು ಭಾವಿಸುವುದರಿಂದ ಅವನು ಈಶ್ವರ, ಅಂದರೆ ಒಡೆಯ.

ಇಂತಹ ಅಸುರರಿಗೆ ಪ್ರಜಾಪತಿಯ ಉಪದೇಶ 'ದ' ಎಂದರೆ **'ದಯಧ್ವಂ'** – ದಯೆತೋರಿ ಎಂದರ್ಥ. "ದಯಾಗುಣವನ್ನು ಬೆಳೆಸಿಕೊಳ್ಳುವುದರ ಮೂಲಕ ಹಿಂಸ್ರಪ್ರವೃತ್ತಿಯನ್ನು ನಿಗ್ರಹಿಸಿ" ಎಂಬುದು ಪ್ರಜಾಪತಿಯ ಉಪದೇಶ. ಇತರರ ಸುಖದಲ್ಲಿ ತನ್ನ ಸುಖವನ್ನು ಕಾಣುವುದೇ ದಯೆ.

ಅನೇಕರು ನರಕಕ್ಕೆ ಧಾವಿಸುತ್ತಿರುವುದರಿಂದ ಒಂದು ಬಾಗಿಲು ಸಾಕಾಗುವುದಿಲ್ಲವೆಂದು ಅದಕ್ಕೆ ಮೂರು ಮಹಾದ್ವಾರಗಳಿವೆ. ಈ ನಿಷೇಧಾತ್ಮಕಭಾವವನ್ನು ಗೆಲ್ಲುವುದು ಹೇಗೆಂಬುದನ್ನು ಶ್ರೀಕೃಷ್ಣ ಹೇಳುತ್ತಾನೆ:

**ಏವಂ ಬುದ್ಧೇಃ ಪರಂ ಬುದ್ಧ್ವಾ ಸಂಸ್ತಭ್ಯಾತ್ಮಾನಮಾತ್ಮನಾ ।**
**ಜಹಿ ಶತ್ರುಂ ಮಹಾಬಾಹೋ ಕಾಮರೂಪಂ ದುರಾಸದಮ್॥**

(೩ : ೪೩)

"ಎಲೈ ಅರ್ಜುನ, ಈ ಪ್ರಕಾರವಾಗಿ ಬುದ್ಧಿಗಿಂತ ಹೆಚ್ಚಿನದಾದ ಆತ್ಮನನ್ನು ತಿಳಿದುಕೊಂಡು, ತನ್ನನ್ನು ನಿಗ್ರಹಿಸಿ ಕಾಮರೂಪವೂ ದುರ್ಜಯವೂ ಆದ ಶತ್ರುವನ್ನು ನಾಶಮಾಡು."

ಸ್ಫೂರ್ತಿಪ್ರಭ

## ನಿಮಗಿದು ಗೊತ್ತೇನು?

೧. ಜಪಾನಿನ ಮಕ್ಕಳು ಪ್ರತಿನಿತ್ಯ ಒಂದು ಗಂಟೆಯ ಕಾಲ ಶಿಕ್ಷಕರೊಂದಿಗೆ ತಮ್ಮ ಶಾಲೆಗಳನ್ನು ಶುಚಿಗೊಳಿಸುತ್ತಾರೆ. ಅದಕ್ಕೆಂದೇ ಜಪಾನೀಯರು ವಿನಯವಂತರೂ, ನೈರ್ಮಲ್ಯಪ್ರಿಯರೂ ಆಗಿರುತ್ತಾರೆ. ೨. ನಾಯಿಯನ್ನು ಅಡ್ಡಾಡಲು ಕರೆದುಕೊಂಡು ಹೋಗುವ ಪ್ರತಿ ಜಪಾನಿ ಪ್ರಜೆಯೂ ನಾಯಿ ಮಾಡುವ ಹೊಲಸನ್ನು ಸಂಗ್ರಹಿಸಲು ಒಂದು ವಿಶೇಷ ಬ್ಯಾಗ್ ಅನ್ನು ಕೊಂಡೊಯ್ಯಬೇಕು. ಆರೋಗ್ಯ ಮತ್ತು ನೈರ್ಮಲ್ಯ – ಇವು ಜಪಾನೀಯರ ಸಾಮಾಜಿಕ ನೈತಿಕತೆಯ ಅವಿಭಾಜ್ಯ ಅಂಗಗಳು. ೩. ಕಸ ಗುಡಿಸುವವರನ್ನು ಜಪಾನಿನಲ್ಲಿ 'ಆರೋಗ್ಯ ತಂತ್ರಜ್ಞ' (Health Engineer) ಎಂದು ಕರೆಯಲಾಗುತ್ತದೆ. ಅವರಿಗೆ ಬರುವ ಸಂಬಳ ೫,೦೦೦ ದಿಂದ ೮,೦೦೦ ಡಾಲರುಗಳು! ೪. ಜಪಾನಿನಲ್ಲಿ ಯಾವುದೇ ರೀತಿಯ ಖನಿಜ ಸಂಪತ್ತಿಲ್ಲ. ಪ್ರತಿವರ್ಷವೂ ನೂರಾರು ಸಣ್ಣಪುಟ್ಟ ಭೂಕಂಪಗಳು ಅಲ್ಲಿ ಆಗುತ್ತಲೇ ಇರುತ್ತವೆ. ಆದರೂ ಆ ದೇಶ ಜಗತ್ತಿನ ಎರಡನೇ ಅತಿದೊಡ್ಡ ವಾಣಿಜ್ಯ ವ್ಯವಹಾರವುಳ್ಳ ದೇಶವಾಗಿದೆ. ಇದು ಹೇಗೆ ಸಾಧ್ಯವಾಯಿತು? ೫. ಹಿರೋಶಿಮಾ ನಗರಕ್ಕೆ ಅಣುಬಾಂಬು ಬಿದ್ದ ಕೇವಲ ಹತ್ತು ವರ್ಷಕ್ಕೆ ಅದು ಮತ್ತೆ ಬೃಹತ್ ವಾಣಿಜ್ಯ ಚಟುವಟಿಕೆಯುಳ್ಳ ನಗರವಾಗಿಬಿಟ್ಟಿತು. ಇದು ಆದದ್ದು ಹೇಗೆ? ೬. ಜಪಾನಿನ ರೈಲುಗಳಲ್ಲಿ, ಹೊಟೆಲ್‌ಗಳಲ್ಲಿ ಮತ್ತು ಒಳಾಂಗಣಗಳಲ್ಲಿ ಮೊಬೈಲ್ ಫೋನ್‌ಗಳನ್ನು ಉಪಯೋಗಿಸುವಂತಿಲ್ಲ. ಇದು ನಿಮಗೆ ಗೊತ್ತೇನು? ೭. ಜಪಾನಿನ ವಿದ್ಯಾರ್ಥಿಗಳು ೬ ನೆಯ ತರಗತಿಯಿಂದಲೇ ಇತರರ ಜೊತೆಗೆ ಹೇಗೆ ನಡೆದುಕೊಳ್ಳಬೇಕು ಎಂಬ ನೈತಿಕತೆಯ ಪಾಠವನ್ನು ಕಲಿಯುತ್ತಾರೆ. ೮. ಜಪಾನೀಯರು ಜಗತ್ತಿನಲ್ಲಿಯೇ ಅತ್ಯಂತ ಶ್ರೀಮಂತ ವರ್ಗಕ್ಕೆ ಸೇರಿದವರಾದರೂ, ಅವರ ಮನೆಗಳಲ್ಲಿ ಸೇವಕರೇ ಇರುವುದಿಲ್ಲ. ಪೋಷಕರೇ ಮಕ್ಕಳ ಮತ್ತು ಮನೆಯ ಜವಾಬ್ದಾರಿಯನ್ನು ಹೊರುತ್ತಾರೆ. ೯. ೧ ನೇ ತರಗತಿಯಿಂದ ೩ ನೇ ತರಗತಿಯವರೆಗೆ ಪರೀಕ್ಷೆಗಳೇ ಇರುವುದಿಲ್ಲ. ಏಕೆಂದರೆ ಜಪಾನೀಯರು ಭಾವಿಸುತ್ತಾರೆ, "ಶಿಕ್ಷಣದ ಗುರಿಯೆಂದರೆ ಪರಿಕಲ್ಪನೆಗಳನ್ನು ಮನಸ್ಸಿನಲ್ಲಿ ಮೂಡಿಸುವುದು ಮತ್ತು ಚಾರಿತ್ರ್ಯವನ್ನು ನಿರ್ಮಾಣ ಮಾಡುವುದು; ಬರಿ ಪರೀಕ್ಷೆ ನಡೆಸುವುದು ಅಥವಾ ಮಾಹಿತಿ ತುಂಬುವುದಲ್ಲ" ಎಂದು. ೧೦. ಜಪಾನಿನ ಔತಣಗಳಲ್ಲಿ ಯಾವುದೇ ಆಹಾರ ಪದಾರ್ಥವನ್ನೂ ವ್ಯರ್ಥಮಾಡುವುದಿಲ್ಲ. ಜಪಾನಿ ಮಕ್ಕಳು ನಿಧಾನವಾಗಿ ಅರ್ಧ ಗಂಟೆ ಕಾಲ ಊಟ ಮಾಡುತ್ತಾರೆ. ಇದು ಅವರ ಜೀರ್ಣಶಕ್ತಿಯನ್ನು ಹೆಚ್ಚಿಸುತ್ತದೆ. ಹಾಗೆಯೇ ಮಕ್ಕಳು ಶಾಲೆಯಲ್ಲಿ ಊಟ ಮಾಡಿದ ಮೇಲೆ ಹಲ್ಲುಗಳನ್ನು ಬ್ರಶ್ ಮಾಡಿ ತೊಳೆದುಕೊಳ್ಳುತ್ತಾರೆ. ೧೧. ಜಪಾನಿನಲ್ಲಿ ರೈಲುಗಳು ತಡವಾಗುವ ಅಂದಾಜು ಎಷ್ಟು ಗೊತ್ತೇ? ವರ್ಷಕ್ಕೆ ಕೇವಲ ೭ ಸೆಕೆಂಡ್ ಮಾತ್ರ. ಏಕೆಂದರೆ, ಜಪಾನಿಯರು ಸ್ವಭಾವತಃ ಸಮಯಪಾಲನೆಗೆ ಬಹಳ ಮಹತ್ವ ಕೊಡುತ್ತಾರೆ (**ಆಧಾರ** : ಇಂಟರ್‌ನೆಟ್)